**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾವೇರಿ.**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಎಸ್.ವಿ.ಸಿ. 1/2017**

ಅಸಾ ಃ 03

ಚಾಸಾ ಃ 03

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಎಸ್.ಡಿ.ಮಂಜುನಾಥ |
| ತಂದೆಯ ಹೆಸರು | ಃ | ದುರಗಪ್ಪ |
| ವಯಸ್ಸು | ಃ | 57 ವರ್ಷ |
| ಉದ್ಯೋಗ | ಃ | ಸೂಪರಿಟೆಂಡೆಂಟ್, ಕೆಜಿಐಡಿ ಕಛೇರಿ, ಶಿವಮೊಗ್ಗ |
| ವಾಸ ಸ್ಥಳ | ಃ | ಶಿವಮೊಗ್ಗ. |

ದಿನಾಂಕಃ **29/01/2026** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಮಾನ್ಯ ವಿಶೇಷ ಸಾರ್ವಜನಿಕ ಅಭಿಯೋಜಕರಿಂದಃ –**

1. 2012 ರಿಂದ 2019 ರವರೆಗೆ ನಾನು ಹಾವೇರಿಯ ಕೆ.ಜಿ.ಐ.ಡಿ. ಕಛೇರಿಯ ದ್ವಿ.ದ.ಸ. ಎಂದು ಕೆಲಸ ಮಾಡಿದ್ದೇನೆ.

2. ದಿನಾಂಕಃ21/03/2013 ರಂದು ನನ್ನ ಮೇಲಾಧಿಕಾರಿಯು ಪಂಚನಾಗಿ ಲೋಕಾಯುಕ್ತ ಪೊಲೀಸ ಠಾಣೆಗೆ ಹೋಗುವಂತೆ ತಿಳಿಸಿದರು. ಸಂಜೆ 5.00 ಘಂಟೆಗೆ ನಾನು ಪೊಲೀಸ ಠಾಣೆಗೆ ಹೋದೆ. ಚಾಸಾ-4 ಮತ್ತು ಲೋಕಾಯುಕ್ತ ಪೊಲೀಸರು ಹಾಜರಿದ್ದರು. ಆರೋಪಿ ರಾಜಾಭಕ್ಷಿ ಗುಡಗೇರಿ ರವರ ಅಕ್ರಮ ಆಸ್ತಿ ಕುರಿತು ದೂರು ಬಂದಿದ್ದು, ಪಂಚನಾಗಿ ಸಹಕರಿಸುವಂತೆ ಪೊಲೀಸರು ನನ್ನನ್ನು ಕೇಳಿಕೊಂಡರು. ನಾನು ವಾಪಾಸು ಬಂದೆ.

3. ದಿನಾಂಕಃ22/03/2013 ರಂದು ಬೆಳಿಗ್ಗೆ 5.00 ಘಂಟೆಗೆ ನಾವು ಪುನಃ ಲೋಕಾಯುಕ್ತ ಕಾರ್ಯಾಲಯಕ್ಕೆ ಹೋದೆವು. ಚಾಸಾ-2 ಅಲ್ಲಿ ಹಾಜರಿದ್ದರು. ಪೊಲೀಸರು ನಮ್ಮನ್ನು ಹಾವೇರಿಯ ಬಸ್ತಿ ಓಣಿಯಲ್ಲಿರುವ ಒಂದು ಮನೆಗೆ ಕರೆದುಕೊಂಡು ಹೋದರು. ಆಗ ಬೆಳಿಗ್ಗೆ 6.10 ನಿಮಿಷ ಆಗಿತ್ತು. ಇನ್ಸಪೆಕ್ಟರ ಸದರಿ ಮನೆಯ ಬಾಗಿಲನ್ನು ತಟ್ಟಿದರು. ಒಬ್ಬ ವ್ಯಕ್ತಿ ಬಂದು ಬಾಗಿಲನ್ನು ತೆಗೆದರು. ಪೊಲೀಸರು ತಮ್ಮನ್ನು ಪರಿಚಯಿಸಿಕೊಂಡು ಶೋಧನೆ ಕುರಿತು ವಾರೆಂಟ್ ತಂದ ವಿಷಯ ತಿಳಿಸಿದರು. ಮನೆಯ ಹೊರಗೆ ಒಂದು ಕಾರು ಮತ್ತು ಎರಡು ಬೈಕುಗಳು ಇದ್ದವು. ನಾವೆಲ್ಲ ಮನೆಯ ಒಳಗೆ ಹೋದೆವು.

4. ಮನೆಯನ್ನು ಶೋಧಿಸಿದಾಗ ಬೆಲೆಬಾಳುವ ಸೋಫಾ, ಐಶಾರಾಮಿ ವಸ್ತು, ಖುರ್ಚಿ, ಟೀಪಾಯಿ, ಶೋಕೇಸನಲ್ಲಿ ಬೆಲೆಬಾಳುವ ವಸ್ತುಗಳು, ಟಿವಿ, ಫ್ಯಾನ್ ಇತ್ಯಾದಿ ಇದ್ದವು. ಅವುಗಳ ಮಾಲ್ಯಮಾಪನ ಮಾಡಲಾಯಿತು.

5. ಮತ್ತೊಂದು ಹಾಲ್‌ಗೆ ಹೋಗಿ ನೋಡಿದಾಗ ಅಲ್ಲಿಯೂ ಸಹ ಬೆಲೆಬಾಳುವ ಸೋಫಾ, ಕಟ್ಟಿಗೆಯ ಖುರ್ಚಿ, ಟಿವಿ, ಫ್ಯಾನ್, ರಸೀದಿಗಳು, ಪಾಸಬುಕ್, ಚೆಕಬುಕ್ಕ, ದಾಖಲೆಗಳ ಝರಾಕ್ಸ ಪ್ರತಿ ಇತ್ಯಾದಿ ಇದ್ದವು. ಕಿಚನ್ ನಲ್ಲಿ ಪಾತ್ರೆಗಳು, ದಿನಸಿ ವಸ್ತುಗಳು, ಡಬ್ಬಿಗಳಲ್ಲಿ ನಾಣ್ಯಗಳು, ಮಿಕ್ಸಿ, ಜಾರ್, ಫ್ರಿಡ್ಜ ಇದ್ದವು.

6. ಬೆಡರೂಮಿನಲ್ಲಿ ಕಾಟ್ ಹಾಗೂ ಅಲ್ಮೇರಾ ಇದ್ದು, ಅಲ್ಮೇರಾ ತೆರೆದು ನೋಡಿದಾಗ ಬೆಳ್ಳಿ ಮತ್ತು ಬಂಗಾರ, ಬಟ್ಟೆ-ಬರೆ ಇದ್ದವು. ನಮ್ಮೊಂದಿಗೆ ಬಂದ ಅಕ್ಕಸಾಲಿಗ ಅವುಗಳನ್ನು ತೂಗಿ ನೋಡಿದ. ಬೆಳ್ಳಿ 96 ಗ್ರಾಂ ಇತ್ತು. ಬಂಗಾರ 115 ಗ್ರಾಂ ಇತ್ತು. ಮನೆ ಮತ್ತು ಜಮೀನಿಗೆ ಸಂಬಂಧಿಸಿದ ದಾಖಲೆಗಳು ಇದ್ದವು. ಪಂಚನಾಮೆ ತಯಾರಿಸಿ ಪೊಲೀಸರು ಸದರಿ ವಸ್ತುಗಳನ್ನು ಜಪ್ತಿ ಮಾಡಿದರು. ಅಲ್ಮೇರಾದಲ್ಲಿ ರೂ.3,15,000/- ಹಣ ಇತ್ತು. ಜಪ್ತಿಮಾಡಲಾದ ವಸ್ತುಗಳ ಮೌಲ್ಯಮಾಪನ ಮಾಡಲಾಯಿತು. ನನ್ನ ಸಹಿ ಪಡೆದರು. ಪಂಚನಾಮೆಯನ್ನು ಈಗಾಗಾಲೇ ನಿಪಿ-4 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ಬೆಳಿಗ್ಗೆ 6.10 ರಿಂದ ರಾತ್ರಿ 8.00 ಘಂಟೆಯವರೆಗೆ ಪಂಚನಾಮೆ ತಯಾರಿಸಲಾಯಿತು.

7. ದಿನಾಂಕಃ23/03/2013 ರಂದು ಠಾಣೆಗೆ ಬರುವಂತೆ ಪೊಲೀಸರು ನನಗೆ ತಿಳಿಸಿದರು. ನಾನು ಮತ್ತು ಚಾಸಾ-2 ರು ದಿನಾಂಕಃ23/03/2013 ರಂದು ಠಾಣೆಗೆ ಹೋದೆವು. ಹಾವೇರಿಯ ಕನಕಾಪುರ ರಸ್ತೆಯಲ್ಲಿರುವ ಆರೋಪಿಯ ಜಮೀನು ಮತ್ತು ತೋಟದಲ್ಲಿರುವ ಶೀಟು ಹಾಕಿದ ಮನೆ, ದನದಕೊಟ್ಟಿಗೆಗೆ ಹೋದೆವು. ಅಲ್ಲಿ ಇದ್ದ ಕೃಷಿ ಸಲಕರಣೆಗಳು, ಕಟಾವು ಮಾಡಿದ ಗೋವಿನಜೋಳ, ಒಂದು ಡಾಬರಮನ್ ನಾಯಿ ಪರಿಶೀಲಿಸಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಪಂಚನಾಮೆಯನ್ನು ಈಗಗಾಲೇ ನಿಪಿ-5 ಎಂದು ಗುರುತಿಸಲಾಗಿದ್ದು, ನನ್ನ ಸಹಿಯನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ ಯು.ಎನ್.ಜಿ. ವಕೀಲರಿಂದಃ-**

8. ಈ ಮುಂಚೆ ನಾನು ಎರಡು ಕೇಸುಗಳಲ್ಲಿ ನಾನು ಪಂಚನಾಗಿ ಭಾಗವಹಿಸಿದ್ದೆ. ಲೋಕಾಯುಕ್ತ ಪೊಲೀಸರು ನನಗೆ ನೋಟೀಸು ಕೊಟ್ಟಿರಲಿಲ್ಲ. ನನ್ನ ಮೇಲಾಧಿಕಾರಿಗೆ ಯಾರು ನೋಟೀಸು ಕೊಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ ಎಂದರೆ ಪಂಚರನ್ನಾಗಿ ಕಳಿಸುವಂತೆ ಕೇಳಲಾಗಿತ್ತು. ಪೊಲೀಸರು ನನ್ನ ಮೇಲಾಧಿಕಾರಿಗೆ ಬರೆದ ಮನವಿಯನ್ನು ನೋಡಿದ್ದೇನೆ, ಅದರಲ್ಲಿ

ಬರೆದ ವಿಷಯ ಗೊತ್ತಿಲ್ಲ. ಪಂಚನಾಮೆಗೆ ಹೋಗಲು ಲಿಖಿತ ಆದೇಶ ನೀಡುವಂತೆ ನಾನು ಮೇಲಾಧಿಕಾರಿಗೆ ಕೇಳಿಕೊಂಡಿಲ್ಲ. ಠಾಣೆಗೆ ಹೋಗಿ ಪೊಲೀಸರು ಹೇಳಿದಂತೆ ನಡೆದುಕೊಳ್ಳಲು ನನ್ನ ಮೇಲಾಧಿಕಾರಿಗಳು ನನಗೆ ತಿಳಿಸಿದರು ಎನ್ನುವುದು ನಿಜ.

9. ನನ್ನನ್ನು ಕರೆಯಲು ಪೊಲೀಸರು ಬಂದಿರಲಿಲ್ಲ. ಪಂಚನಾಮೆಗೆ ಹೋಗುವ ಸಂಬಂಧ ನಾನು ನಮ್ಮ ಕಛೇರಿಯ ಚಲನ-ವಲನ ರಜಿಸ್ಟರನಲ್ಲಿ ನಮೂದು ಮಾಡಿಲ್ಲ. ನಾನು ಠಾಣೆಗೆ ಹೋದಾಗ ಹಾಜರಿದ್ದ ಪೊಲೀಸ ಅಧಿಕಾರಿಗಳ ಹೆಸರು, ವಿಳಾಸ ಮತ್ತು ಹುದ್ದೆ ನೆನಪಿಲ್ಲ. ಈ ಕೇಸಿನ ಸಂಬಂಧ ಮೊದಲ ಬಾರಿ ಪೊಲೀಸ ಠಾಣೆಗೆ ಹೋದಾಗ 10 ನಿಮಿಷ ಠಾಣೆಯಲ್ಲಿ ಇದ್ದೆ. ಆ ದಿನ ಪೊಲೀಸರು ನನ್ನ ಸಹಿ ಪಡೆಯಲಿಲ್ಲ. ಮರುದಿನ ಬೆಳಿಗ್ಗೆ ಬರುವಂತೆ ನನಗೆ ನೋಟೀಸು ಕೊಡಲಿಲ್ಲ.

10. ಪಂಚನಾಮೆಗೆ ಮುಂಚೆ 6 ವರ್ಷಗಳಿಂದ ನಾನು ಹಾವೇರಿಯಲ್ಲಿದ್ದೆ. ಹಾವೇರಿಯ ಎಂ.ಜಿ.ರೋಡ, ಸುಭಾಸ ರೋಡ, ಬಸ್ತಿ ಓಣಿ ಮತ್ತು ಮಾರುಕಟ್ಟೆ ನನಗೆ ಪರಿಚಿತ ಸ್ಥಳಗಳಾಗಿದ್ದವು ಎನ್ನುವುದು ಸುಳ್ಳು. ಮರುದಿನ ಪುನಃ ಠಾಣೆಗೆ ಹೋಗಲು ನನ್ನ ಮೇಲಾಧಿಕಾರಿಯಿಂದ ಪರವಾನಿಗೆ ಅಥವಾ ಲಿಖಿತ ಪರವಾನಿಗೆ ಪಡೆದಿಲ್ಲ.

11. ಹಾವೇರಿ ಲೋಕಾಯುಕ್ತ ಪೊಲೀಸ ಠಾಣೆ ಉತ್ತರಾಭಿಮುಖವಾಗಿದೆ. ಸದರಿ ಠಾಣೆಯ ಚೆಕ್ಕುಬಂದಿ ಹೇಳಲು ಬರುವುದಿಲ್ಲ. ದಾಳಿ ಕಾಲಕ್ಕೆ ಬಂದ ಪೊಲೀಸ ಅಧಿಕಾರಿ ಮತ್ತು ಸಿಬ್ಬಂದಿಯವರ ಹೆಸರು, ಹುದ್ದೆ ಮತ್ತು ವಿಳಾಸ ಗೊತ್ತಿಲ್ಲ. ನಿಪಿ-4 ಮತ್ತು 5 ನ್ನು ಬರೆಯಲು ನಾನು ಉಕ್ತಲೇಖನ ನೀಡಿಲ್ಲ. ಸದರಿ ದಾಖಲೆಗಳಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎನ್ನುವುದು ಸುಳ್ಳು. ಅದನ್ನು ಓದಿ ಹೇಳಲಾಯಿತು. ಎಲ್ಲಾ ಸಹಿಗಳನ್ನು ಲೋಕಾಯುಕ್ತ ಕಛೇರಿಯಲ್ಲಿ ಮಾಡಿದ್ದೇನೆ ಎನ್ನುವುದು ಸುಳ್ಳು. ನಿಪಿ-4 ಮತ್ತು 5 ರಲ್ಲಿ ಬರೆದ ವಸ್ತುಗಳ ಮೌಲ್ಯವನ್ನು ನಾನು ನಿರ್ಧರಿಸಿಲ್ಲ. ಸದರಿ ವಸ್ತುಗಳು ಯಾವಾಗ, ಹೇಗೆ ಮತ್ತು ಯಾರಿಂದ ಬಂದಿವೆ ಎನ್ನುವುದು ನನಗೆ ಗೊತ್ತಿಲ್ಲ.

12. ಪಂಚನಾಮೆಯಲ್ಲಿ ಬರೆದ ಬೆಳ್ಳಿ ಮತ್ತು ಬಂಗಾರಗಳನ್ನು ಯಾರು ಉಡುಗೊರೆ ನೀಡಿದ್ದರು ಅಥವಾ ಖರೀದಿಸಿದ್ದರು ಎನ್ನುವುದು ಗೊತ್ತಿಲ್ಲ. ಜಪ್ತಿಮಾಡಲಾದ ಒಟ್ಟು ವಸ್ತುಗಳ ಸಂಖ್ಯೆ ನೆನಪಿಲ್ಲ. ಆರೋಪಿ ಮನೆಯು ಪೂರ್ವಾಭಿಮುಖವಾಗಿದೆ. ಸದರಿ ಮನೆಯ ಚೆಕ್ಕುಬಂದಿ ಗೊತ್ತಿಲ್ಲ. ನಿಪಿ-5 ರಲ್ಲಿ ಬರೆದ ಮನೆಯ ಚೆಕ್ಕುಬಂದಿ ಹೇಳಲು ಬರುವುದಿಲ್ಲ.

13. ವಸ್ತುಗಳ ಮೌಲ್ಯವನ್ನು ಪೊಲೀಸರೇ ಬರೆದರು ಎಂದರೆ ನೋಡಿ ವಿಚಾರಿಸಿ ಬರೆದಿದ್ದಾರೆ. ಪೊಲೀಸರು ಹೇಳಿದ್ದರಿಂದ ಪಂಚನಾಮೆಗಳಿಗೆ ಸಹಿ ಮಾಡಿದ್ದೇನೆ ಎನ್ನುವುದು ನಿಜ. ವಾಹನ, ಬೈಕು, ಕಂಪ್ಯೂಟರ ಇತ್ಯಾದಿ ಯಾವಾಗ ಮತ್ತು ಎಷ್ಟು ಮೌಲ್ಯಕ್ಕೆ ಖರೀದಿಸಲಾಗಿತ್ತು ಎನ್ನುವುದು ಗೊತ್ತಿಲ್ಲ. ನಮ್ಮೊಂದಿಗೆ ಮಹಿಳಾ ಪೊಲೀಸರು ಬಂದಿರಲಿಲ್ಲ. ನಾನು ಪಂಚನಾಮೆ ಯನ್ನು ಹೊರತುಪಡಿಸಿ ಇತರ ದಾಖಲೆಗಳಿಗೆ ಸಹಿ ಮಾಡಿಲ್ಲ. ತೋಟದಲ್ಲಿ ಜಪ್ತಿಮಾಡಲಾದ

ವಸ್ತುಗಳ ನಿಖರವಾದ ಬೆಲೆ ಹೇಳಲು ಬರುವುದಿಲ್ಲ. ಪೊಲೀಸರೇ ಮೌಲ್ಯ ನಮೂದಿಸಿದ್ದಾರೆ. ಐಶಾರಾಮಿ ವಸ್ತುಗಳು ಎಂದು ಪಂಚನಾಮೆಗಳಲ್ಲಿ ನಮೂದು ಮಾಡಿಲ್ಲ ಎನ್ನುವುದು ನೆನಪಿಲ್ಲ.

14. ದಿನಾಂಕಃ21/03/2013 ರಂದು ನನ್ನನ್ನು ಪಂಚನಾಮೆ ಕುರಿತು ಲೋಕಾಯುಕ್ತ ಠಾಣೆಗೆ ಹೋಗುವಂತೆ ನನ್ನ ಮೇಲಾಧಿಕಾರಿ ತಿಳಿಸಿಲ್ಲ ಎನ್ನುವುದು ಸುಳ್ಳು.

15. ಮರುದಿನ ನಾನು ಪಂಚನಾಮೆ ಕುರಿತು ಹೋಗಿಲ್ಲ ಮತ್ತು ದಾಳಿ ನಡೆಸಿಲ್ಲ ಎನ್ನುವುದು ಸುಳ್ಳು. ಬಟ್ಟೆ, ಪೀಠೋಪಕರಣ, ಬಂಗಾರ, ಬೆಳ್ಳಿ, ವಾಹನ, ಕಂಪ್ಯೂಟರ ಮತ್ತು ಆಸ್ತಿಗಳ ಮೌಲ್ಯ ನಿರ್ಧಾರ ಮಾಡಿಲ್ಲ ಎನ್ನುವುದು ಸುಳ್ಳು. ಪೊಲೀಸರು ಪಂಚನಾಮೆ ತಯರಿಸಿಲ್ಲ ಎನ್ನುವುದು ಸುಳ್ಳು. ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಜಪ್ತಿ ಮಾಡಿಲ್ಲ ಎನ್ನುವುದು ಸುಳ್ಳು.

16. ದಿನಾಂಕಃ23/03/2013 ರಂದು ನಾನು ಪಂಚನಾಮೆ ಕುರಿತು ಹೋಗಿಲ್ಲ ಮತ್ತು ದಾಳಿ ನಡೆಸಿಲ್ಲ ಎನ್ನುವುದು ಸುಳ್ಳು. ವಾಹನ, ದವಸಧಾನ್ಯ, ಇತ್ಯಾದಿಗಳ ಮೌಲ್ಯ ನಿರ್ಧಾರ ಮಾಡಿಲ್ಲ ಮತ್ತು ಅವುಗಳನ್ನು ಜಪ್ತಿಮಾಡಿಲ್ಲ ಎನ್ನುವುದು ಸುಳ್ಳು. ಪೊಲೀಸರು ಪಂಚನಾಮೆ ತಯಾರಿಸಿಲ್ಲ ಎನ್ನುವುದು ಸುಳ್ಳು. ನನ್ನ ಸಮಕ್ಷಮ ಯಾವುದೇ ಸ್ವತ್ತನ್ನು ಜಪ್ತಿ ಮಾಡಿಲ್ಲ ಎನ್ನುವುದು ಸುಳ್ಳು. ನಿಪಿ-4 ಮತ್ತು 5 ನ್ನು ನನ್ನ ಸಮಕ್ಷಮ ತಯಾರಿಸಿಲ್ಲವಾದರೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸುಳ್ಳು.

**ಮರು ವಿಚಾರಣೆಃ** ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.**)**
ಓ ಹೇ ಕೇ ಸರಿ ಇದೆ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಹಾಗೂ ವಿಶೇಷ ನ್ಯಾಯಾಧೀಶರು, ಹಾವೇರಿ.